# ‘ಮುಖಪುಟ’ದ ಮುಖ

‘ಪಕ್ಕದ ಮನೆಯವರನ್ನು ಪ್ರೀತಿಸು’ ಎಂದದ್ದು ಜೀಸಸ್. ಆದರೆ ನಮ್ಮ ಮಾರ್ಕ್ ಜೂಕರ್‌ಬರ್ಗ್ ಪಕ್ಕದ ಮನೆಯವರ ಜಮೀನುಗಳನ್ನೆಲ್ಲ ಪ್ರೀತಿಸುತ್ತಿದ್ದಾರಂತೆ! ‘ಜೂಕರ್‌ಬರ್ಗ್ ಕ್ರಿಶ್ಚಿಯನ್ ಅಲ್ಲ, ಯೆಹೂದಿ. ಅದಕ್ಕೇ ಹಾಗೆ’ ಎಂದು ತಮಾಷೆ ಮಾಡುವುದು ಸುಲಭ. ಆದರೆ ಪಕ್ಕದ ಮನೆಯವರ ಜಮೀನಿನ ವಿವಾದ ಈಗ ಕೋರ್ಟ್ ಮೆಟ್ಟಿಲೇರಿದೆ; ತಮಾಷೆಯ ವಿಷಯವಾಗಿ ಉಳಿದಿಲ್ಲ.

‘ಯಾರೀ ಜೂಕರ್‌ಬರ್ಗ್’ ಎಂದು ಕೇಳಿದರೆ, ನೀವು ಸ್ವಲ್ಪ ಹಳೇ ಕಾಲದವರೆಂದೇ ಅರ್ಥ. ಮಾರ್ಕ್ ಜೂಕರ್‌ಬರ್ಗ್ ‘ಫೇಸ್‌ಬುಕ್’ ಸಂಸ್ಥಾಪಕ. ಐವರು ಸ್ನೇಹಿತರ ಜತೆ ಮಾರ್ಕ್ ‘ಫೇಸ್‌ಬುಕ್’ಅನ್ನು ಹುಟ್ಟುಹಾಕಿದಾಗ, ಅದು ಜಗತ್ತಿನಾದ್ಯಂತ ಇಷ್ಟೊಂದು ಜನಪ್ರಿಯವಾಗುತ್ತದೆ ಎಂದು ಅವರು ಯಾರೂ ಅಂದುಕೊಂಡಿರಲಿಲ್ಲ. ಆದರೆ ಇವತ್ತು 15 ಕೋಟಿ ಜನರು ಬಳಸುತ್ತಿರುವ ಫೇಸ್‌ಬುಕ್ ಎಂಬ ಸಾಮಾಜಿಕ ಜಾಲತಾಣ, ಕೆಲವು ದೇಶಗಳಲ್ಲಿ ರಾಜಕೀಯ ವಿಪ್ಲವಕ್ಕೂ ಸಾಧನವಾದದ್ದು ಸುಳ್ಳಲ್ಲ. ಈಗ ಐವರು ಸ್ನೇಹಿತರು ಜತೆಗಿಲ್ಲ. 31ರ ಹರೆಯದ ಮಾರ್ಕ್ ಜಗತ್ತಿನ 14ನೇ ಅತಿ ದೊಡ್ಡ ಶ್ರೀಮಂತನಾಗಿ ಬೆಳೆದು ನಿಂತಿದ್ದಾನೆ. ಶ್ರೀಮಂತಿಕೆ ಹೆಚ್ಚಿದಷ್ಟೂ ಖಾಸಗಿತನ ಹೆಚ್ಚುತ್ತದಂತೆ. ಮಾರ್ಕ್ ಕೂಡಾ ಹೆಚ್ಚು ಹೆಚ್ಚು ಖಾಸಗಿತನವನ್ನು ಪ್ರೀತಿಸತೊಡಗಿದ್ದಾನೆ. ಅದಕ್ಕೆಂದೇ ತನ್ನ ಬಂಗಲೆಯ ಸುತ್ತ ಇರುವ ಎಲ್ಲ ಜಮೀನುಗಳನ್ನೂ, ಮನೆಗಳನ್ನೂ ಖರೀದಿಸುತ್ತಿದ್ದಾನೆ. ಸುತ್ತ ಇರುವ ಮೂರು ಜಮೀನುಗಳನ್ನು ಖರೀದಿಸಿಯಾಗಿದೆ. ಒಂದು ಜಮೀನಿನ ಹಾಗೂ ಅದರಲ್ಲಿದ್ದ ದೊಡ್ಡ ಕಟ್ಟಡದ ಖರೀದಿ ಮಾತ್ರ ತಾಪತ್ರಯವಾಗಿ ಕಾಡುತ್ತಿದೆ.

‘ನನ್ನ ಜಮೀನಿನಲ್ಲಿ ಎತ್ತರದ ಕಟ್ಟಡವೊಂದನ್ನು ಕಟ್ಟಲು ಬಿಲ್ಡರ್ ಜತೆ ಕಾಂಟ್ರಾಕ್ಟ್ ಮಾಡಿಕೊಂಡಿದ್ದೇನೆ. ಆದರೆ ಮಾರ್ಕ್ ಜೂಕರ್‌ಬರ್ಗ್ ಆ ಬಿಲ್ಡರ್ ಜತೆ ಗುಪ್ತವಾಗಿ ಒಪ್ಪಂದ ಮಾಡಿಕೊಂಡಿದ್ದು, ಕಟ್ಟಡದ ಎತ್ತರ ಕಡಿಮೆ ಮಾಡುವುದಕ್ಕಾಗಿ ಬಿಲ್ಡರ್‌ಗೆ 17 ಲಕ್ಷ ಡಾಲರ್ ಹಣ ನೀಡಿದ್ದಾನೆ’ ಎನ್ನುವುದು ಜೂಕರ್‌ಬರ್ಗ್‌ನ ಪಕ್ಕದ ಮನೆಯಾತನ ತಕರಾರು. ತಮಾಷೆಯೆಂದರೆ ಆ ಬಿಲ್ಡರ್ ಕೂಡಾ ಜೂಕರ್‌ಬರ್ಗ್ ಮೇಲೆ ಕೇಸು ಹಾಕಿದ್ದಾನೆ. ‘ನನ್ನನ್ನು ಸಿಲಿಕಾನ್ ವ್ಯಾಲಿಯ ಗಣ್ಯರಿಗೆ ಪರಿಚಯ ಮಾಡಿಕೊಡುತ್ತೇನೆ ಎಂದು ನಂಬಿಸಿ ಜೂಕರ್‌ಬರ್ಗ್ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡಿದ್ದಾನೆ. ಆದರೆ ಮಾತು ತಪ್ಪಿದ್ದಾನೆ’ ಎನ್ನುವುದು ಆ ಬಿಲ್ಡರ್ ತಕರಾರು.

ಸಿರಿವಂತ ಎಂದಮೇಲೆ ಜಮೀನಿನ ತಕರಾರುಗಳು ಇದ್ದದ್ದೇ. ಜೂಕರ್‌ಬರ್ಗ್‌ನ ಒಟ್ಟು ವೈಯಕ್ತಿಕ ಆಸ್ತಿ ಮೌಲ್ಯ 35.1 ಶತಕೋಟಿ ಡಾಲರ್‌ಗೇರಿದೆ. ಫೇಸ್‌ಬುಕ್‌ನ ಸಿಇಓ ಮತ್ತು ಚೇರ್‌ಮನ್ ಆಗಿ ಆತ ತೆಗೆದುಕೊಳ್ಳುತ್ತಿರುವ ಸಂಬಳ ಮಾತ್ರ ತಿಂಗಳಿಗೆ ಒಂದು ಡಾಲರ್! ಫೇಸ್‌ಬುಕ್ ಜನಪ್ರಿಯತೆ ಇಳಿಯುತ್ತಿದೆ ಎಂದು ಐದಾರು ತಿಂಗಳ ಹಿಂದೆ ವರದಿಗಳು ಪ್ರಕಟವಾದರೂ, ಅದರ ಜನಪ್ರಿಯತೆ ಎಳ್ಳಷ್ಟೂ ಕುಗ್ಗಿಲ್ಲ. ಅಮೇರಿಕನ್ನರಂತೂ ದಿನಕ್ಕೆ ಸರಾಸರಿ 40 ನಿಮಿಷಗಳಷ್ಟು ಫೇಸ್‌ಬುಕ್ ಬಳಕೆ ಮಾಡುತ್ತಾರೆ ಎನ್ನುವುದು ಒಂದು ಅಂದಾಜು. ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಜೂಕರ್‌ಬರ್ಗ್ ಎರಡು ವಾರಕ್ಕೊಂದು ಪ್ರಮುಖ ಪುಸ್ತಕದ ಪರಿಚಯವನ್ನೂ ಮಾಡುತ್ತಿದ್ದಾನೆ. ಪುಸ್ತಕಗಳ ಚರ್ಚೆಯೂ ಜೋರಾಗಿ ನಡೆಯುತ್ತಿದೆ. ‘ಪುಕ್ಕಟೆಯಾಗಿ ಕೊಡುವುದರ ಬದಲು ಫೇಸ್‌ಬುಕ್ ಬಳಕೆದಾರರಿಗೆ ತಿಂಗಳಿಗೆ ಒಂದು ಡಾಲರ್ ಶುಲ್ಕ ವಿಧಿಸಿ. ಆದರೆ ಬಳಕೆದಾರರ ಖಾಸಗಿತನದ ಹಕ್ಕುಗಳನ್ನು ರಕ್ಷಿಸಿ’ ಎಂದು ಫೇಸ್‌ಬುಕ್ ಬಳಕೆದಾರರೊಬ್ಬರು ನೀಡಿರುವ ಸಲಹೆಯ ಬಗ್ಗೆಯೂ ಚರ್ಚೆ ಶುರುವಾಗಿದೆ. ಫೇಸ್‌ಬುಕ್‌ನಲ್ಲಿರುವ ಬಳಕೆದಾರರ ಖಾಸಗಿ ವಿವರಗಳು ಗ್ರಾಹಕ ಕಂಪೆನಿಗಳಿಗೆ ಮಾರಾಟವಾಗುತ್ತಿವೆ ಎನ್ನುವ ಆರೋಪಗಳು ಹಳೆಯದ್ದು. ಜೂಕರ್‌ಬರ್ಗ್ ಈ ಬಗ್ಗೆ ಈವರೆಗೆ ಬಾಯಿ ಬಿಟ್ಟಿಲ್ಲ.

ಜೂಕರ್‌ಬರ್ಗ್ ಪಕ್ಕಾ ಟೆಕ್ಕೀಮ್ಯಾನ್ ಎನ್ನುವುದಂತೂ ಸುಳ್ಳಲ್ಲ. ಹಲ್ಲಿನ ಡಾಕ್ಟರರ ಮಗನಾಗಿದ್ದ ಆತನಿಗೆ ಚಿಕ್ಕಂದಿನಲ್ಲೇ ಸ್ಕೂಲು ಬೋರು ಎನ್ನಿಸಿತ್ತು. ತಂದೆಯ ಕ್ಲಿನಿಕ್ಕಿನಲ್ಲಿ ರೋಗಿಗಳ ಬಾಯಿ ಸ್ಕ್ಯಾನ್ ಮಾಡಲು ಇಟ್ಟಿದ್ದ ಕಂಪ್ಯೂಟರ್ ಜತೆಗೆ ಆಟವಾಡುತ್ತಲೇ ಬೆಳೆದ. ತಂದೆ-ಮಗ ಇಬ್ಬರೂ ಸೇರಿ ಮನೆಯ ಕಂಪ್ಯೂಟರಿಗೆ ಪಕ್ಕದಲ್ಲೇ ಇದ್ದ ಕ್ಲಿನಿಕ್‌ನ ಕಂಪ್ಯೂಟರ್ ಕನೆಕ್ಷನ್ ಒದಗಿಸುವ ಹೊಸ ಪ್ರೋಗ್ರಾಮ್ ಕಂಡುಹಿಡಿದು ಅದಕ್ಕೆ ಜುಕ್‌ನೆಟ್ ಎಂದು ಹೆಸರಿಟ್ಟಿದ್ದರು. ಕ್ಲಿನಿಕ್‌ನಲ್ಲಿ ರೋಗಿಗಳು ಬಂದರೆ ಮನೆಯಲ್ಲಿರುವ ಕಂಪ್ಯೂಟರ್‌ನಲ್ಲಿ ಗೊತ್ತಾಗುತ್ತಿತ್ತು. ಮಿಡ್ಲ್‌ಸ್ಕೂಲಲ್ಲಿ ಇದ್ದಾಗ ಟ್ಯೂಟರ್ ಬಳಿ ಹೋಗಿ ಕಂಪ್ಯೂಟರ್ ಕರಗತ ಮಾಡಿಕೊಂಡ. ಇನ್ನೊಬ್ಬ ಅಸಾಧ್ಯ ಪ್ರತಿಭಾವಂತ ಗೆಳೆಯ ಆ್ಯಡಮ್ ಡಿ ಏಂಜೆಲೊ ಜತೆ ಸೇರಿ ಕೃತಕ ಬುದ್ಧಿಮತ್ತೆ ಬಳಸಿದ ಮ್ಯೂಸಿಕ್ ಪ್ಲೇಯರ್ ಕಂಡುಹಿಡಿದಾಗ ಮೈಕ್ರೊಸಾಫ್ಟ್ ಕಣ್ಣಿಗೆ ಬಿದ್ದ. ಆ ಉತ್ಪನ್ನವನ್ನು ಹಣ ಕೊಟ್ಟು ಖರೀದಿಸುವುದಲ್ಲದೆ ಉದ್ಯೋಗ ಕೊಡುವುದಾಗಿ ಮೈಕ್ರೊಸಾಫ್ಟ್ ಕರೆದರೂ ಜೂಕರ್‌ಬರ್ಗ್ ಹೋಗಲಿಲ್ಲ. ತಾನೇ ಇನ್ನೇನಾದರೂ ಹೊಸತನ್ನು ಮಾಡಬೇಕೆಂಬ ಆತನ ಹುಚ್ಚು ಆತನನ್ನು ಯಶಸ್ಸಿನ ತುತ್ತತುದಿಗೆ ತಂದು ನಿಲ್ಲಿಸಿದೆ. ದೈತ್ಯ ಕಂಪೆನಿಗಳ ಆಫರ್‌ಗಳನ್ನು ನಿರಾಕರಿಸುವ ವಿಷಯದ ದಾಖಲೆಯೂ ಈತನ ಹೆಸರಿನಲ್ಲೇ ಇದ್ದಂತಿದೆ. ಫೇಸ್‌ಬುಕ್ ಸ್ಥಾಪಿಸುವುದಕ್ಕೆ ಮುಂಚೆ ಈತ ಈ ರೀತಿ ಸುಮಾರು 11 ಆಫರ್‌ಗಳನ್ನು ತಿರಸ್ಕರಿಸಿದ್ದನಂತೆ!



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65